ಕರ್ನಾಟಕ ಸರ್ಕಾರ

**ಆಯುಕ್ತಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ,**
**ಮಾಗಡಿ ರಸ್ತೆ, ಒಂದನೇ ಕ್ರಾಸ್, ಬೆಂಗಳೂರು-560023.**

ಸಂಖ್ಯೆ: ಸಿಆರ್‌ಜಿ/ಇ-ಪಾರ್/02/22-23 ದಿನಾಂಕ: 13/01/2023
ನೆನಪೋಲೆ 14/02/2023

**ಸುತ್ತೋಲೆ**

ವಿಷಯ:- ಗ್ರೂಪ್ 'ಎ' ಅಧಿಕಾರಿಗಳ 2018-19 ರಿಂದ ಮತ್ತು ಗ್ರೂಪ್ 'ಬಿ' ಮತ್ತು 'ಸಿ' ಅಧಿಕಾರಿ/ಸಿಬ್ಬಂದಿಗಳ 2020-21 ನೇ ಸಾಲಿನಿಂದ ವಾರ್ಷಿಕ ಕಾರ್ಯ ನಿರ್ವಹಣೆ ವರದಿಗಳನ್ನು e-PAR ನಲ್ಲಿ ನಿರ್ವಹಿಸುವ ಬಗ್ಗೆ.

ಉಲ್ಲೇಖ:-
1. ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ ಸಂಖ್ಯೆ: ಡಿಪಿಎಆರ್ /26/ಎಸ್‌ಸಿಆರ್ /2020, ದಿನಾಂಕ 15.07.2020.
2. ಸರ್ಕಾರದ ಆದೇಶ ಸಂಖ್ಯೆ ಆಕುಕ/208/ಸಮನ್ವಯ/2020, ಬೆಂಗಳೂರು, ದಿನಾಂಕ 18.08.2020 ಮತ್ತು 24.08.2020.
3. ನಿರ್ದೇಶನಾಲಯದ ಪತ್ರ ಸಂಖ್ಯೆ ಸಿಆರ್‌ಜಿ/01/12/2020-21, ದಿನಾಂಕ 22.09.2020, 30.01.2021. 24.08.2021 ಮತ್ತು 11.11.2021.
4. ನಿರ್ದೇಶನಾಲಯದ ಪತ್ರ ಸಂಖ್ಯೆ ಸಿಆರ್‌ಜಿ/ಇ-ಪಾರ್/01/22-23, ದಿನಾಂಕ 04.05.2022
5. ಈ ಪತ್ರದ ಸುತ್ತೋಲೆ ಸಂಖ್ಯೆ ಸಿಆರ್‌ಜಿ/ಇ-ಪಾರ್/02/22-23, ದಿನಾಂಕ 04.05.2022 ಮತ್ತು 09.09.2022.
6. ಅ.ಸ.ಪತ್ರ ಸಂಖ್ಯೆ: ಸಿಆರ್‌ಜಿ/ಎ-ಪಾರ್/05/22-23, ದಿನಾಂಕ: 25.11.2022.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೆಖ (5)ರ ಸುತ್ತೋಲೆಯ ಸಮ ಸಂಖ್ಯೆ ಪತ್ರದ ದಿನಾಂಕ 09/09/22 ರ ಪತ್ರದಲ್ಲಿ ಗ್ರೂಪ್ 'ಎ' ಅಧಿಕಾರಿಗಳ 2018-19 ರಿಂದ ಮತ್ತು ಗ್ರೂಪ್ 'ಬಿ' ಮತ್ತು 'ಸಿ' ಅಧಿಕಾರಿ/ಸಿಬ್ಬಂದಿಗಳ 2020-21ನೇ ಸಾಲಿನಿಂದ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳನ್ನು e-PAR ನಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ.

ಇ-ಪಾರ್‌ನಲ್ಲಿ ಆಸ್ತಿ ಹೊಣೆಗಾರಿಕೆ ಪಟ್ಟಿಯನ್ನು ಸಲ್ಲಿಸುವ ವ್ಯವಸ್ಥೆ ಇರುವುದಿಲ್ಲವಾದ್ದರಿಂದ ತಮ್ಮ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಂದ ಚರಾಸ್ತಿ/ಸ್ಥಿರಾಸ್ತಿಗಳ ವಿವರಣೆ ನೀಡುವ ಆಸ್ತಿ ಋಣಭಾರ ಪಟ್ಟಿಯ ನಮೂನೆಯಲ್ಲಿ ಮಾಹಿತಿ ಪಡೆದು ಕೂಡಲೇ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿತ್ತು. ಆದರೆ ಇದುವರೆವಿಗೂ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ, ಆದ್ದರಿಂದ ಈ ಪತ್ರ ತಲುಪಿದ ಕೂಡಲೇ ಗ್ರೂಪ್ 'ಎ' ಮತ್ತು 'ಬಿ' ಅಧಿಕಾರಿಗಳ ಆಸ್ತಿ ಹೊಣೆಗಾರಿಕೆ ಪಟ್ಟಿಯನ್ನು ಪಡೆದು ನಿಯಂತ್ರಣಾಧಿಕಾರಿಯವರ ಮುಖಾಂತರ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ಗ್ರೂಪ್ 'ಸಿ' ಮತ್ತು 'ಡಿ' ವೃಂದದ ನೌಕರರುಗಳ ಆಸ್ತಿ ಹೊಣೆಗಾರಿಕೆ ವಿವರ ಪಟ್ಟಿಯನ್ನು ಪಡೆದು ತಮ್ಮ ತಮ್ಮ ಕಛೇರಿಯಲ್ಲಿ ಕ್ರೋಢಿಕರಿಸಿಡಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ.

ಅಲ್ಲದೇ, ಉಲ್ಲೇಖ(6)ರ ಪತ್ರದಲ್ಲಿ ಇ-ಪಾರ್‌ನಲ್ಲಿ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಕೂಡಲೇ ಪೂರ್ಣಗೊಳಿಸುವಂತೆ ಅಗತ್ಯ ಕ್ರಮ ಕೈಗೊಂಡು ಇ-ಪಾರ್ ಲಾಗಿನ್‌ನಲ್ಲಿ ಯಾವ ಅಧಿಕಾರಿ ಹಂತದಲ್ಲಿ ಬಾಕಿಯಿದೆಯೋ ಆ ವಿವರಗಳನ್ನು ಪರಿಶೀಲಿಸಿ ಅಂತಹ ಅಧಿಕಾರಿಗಳಿಗೆ ನೋಟಿಸ್ ನೀಡುವ ಮೂಲಕ ಮುಂದಿನ ಕ್ರಮ ಕೈಗೊಳ್ಳುವಂತೆ ಹಾಗೂ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಪೂರ್ಣಗೊಳಿಸುವಂತೆ ಸೂಚಿಸಲಾಗಿದ್ದು, ಈ ಸಂಬಂಧ ಸಹ ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿಯನ್ನು ನೀಡಲು ತುರ್ತಾಗಿ ಆದೇಶಿಸಿದೆ.

M. Indumathi
14/2/23
ನಿರ್ದೇಶಕರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.
ಬೆಂಗಳೂರು.

**<u>ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ:-</u>**

1. ವಿಭಾಗೀಯ ಜಂಟಿ ನಿರ್ದೇಶಕರು, ಬೆಂಗಳೂರು ನಗರ, ಬಿ.ಬಿ.ಎಂ.ಪಿ, ಮೈಸೂರು ವಿಭಾಗ, ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ ಇವರುಗಳು ತಮ್ಮ ಅಧೀನಕ್ಕೆ ಒಳಪಡುವ ಜಿಲ್ಲಾ ಆಕುಕ ಅಧಿಕಾರಿಗಳು/ಜಿಲ್ಲಾ ಶಸ್ತ್ರ ಚಿಕಿತ್ಸಕರ ಗಮನಕ್ಕೆ ತಂದು, ಎಲ್ಲಾ ಗ್ರೂಪ್ 'ಸಿ' ಮತ್ತು 'ಡಿ' ನೌಕರರ ಆಸ್ತಿದಾಯಿತ್ವದ ವಿವರಪಟ್ಟಿಕೆಯನ್ನು ಸಲ್ಲಿಸಲು ಸೂಚಿಸಿ, ನಿಯಂತ್ರಣಾಧಿಕಾರಿಗಳು ಪಡೆದು ಸಂಗ್ರಹಿಸಿಡಲು ಸೂಚಿಸಲಾಗಿದೆ.

**<u>ಪ್ರತಿಯನ್ನು:-</u>**

1. ಆಯುಕ್ತರ ಆಪ್ತ ಶಾಖೆ, ಆರೋಗ್ಯ ಮತ್ತು ಕು.ಕ.ಸೇವೆಗಳು, ಬೆಂಗಳೂರು.
2. ಮುಖ್ಯ ಆಡಳಿತಾಧಿಕಾರಿಗಳು, ಆರೋಗ್ಯ ಮತ್ತು ಕು.ಕ.ಸೇವೆಗಳು, ಬೆಂಗಳೂರು.
3. ಗಣಕಯಂತ್ರ ವಿಭಾಗ, ಇಲಾಖೆಯ ಅಂತರ್ಜಾಲದಲ್ಲಿ ಪ್ರಚುರಪಡಿಸಲು ತಿಳಿಸಿದೆ.
4. ಕಛೇರಿ ಪ್ರತಿ.